ಕರ್ನಾಟಕ ಸರ್ಕಾರ

# ಉಪನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ಜಿಲ್ಲೆ, ಮೈಸೂರು

E-mail Id : ddpimys@gmail.com & ddpi.edu.karmys@nic.in
Telephone No : 0821-2490025

---

ಸಂಖ್ಯೆ:ಎ5/41473/ಆರ್.ಟಿ.ಇ ಮಾನ್ಯತೆ-114/2017-18 ದಿನಾಂಕ:02-07-2018

ಸೇಂಟ್ ಮೇರಿಸ್ ಎಜುಕೇಷನ್ ಟ್ರಸ್ಟ್
ವಿವೇಕನಂದನಗರ ಟಿ.ನರಸೀಪುರ ತಾಲ್ಲೂಕು
ಮೈಸೂರು ಜಿಲ್ಲೆ

ವಿಷಯ:- ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ನಿಯಮಗಳು 2012 ಕರ್ನಾಟಕ ಇದರ ನಿಯಮ 12ರ ಉಪನಿಯಮ -4 ಮತ್ತು ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯಿದೆ 2009ರ ಸೆಕ್ಷನ್ 18 ರಂತೆ ಶಾಲೆಗಳಿಗೆ ಮಾನ್ಯತೆ ದೃಢೀಕರಣ ಪತ್ರ ನೀಡುವ ಬಗ್ಗೆ

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯತೆ ದೃಢೀಕರಣ ನೀಡಲು ನೀವು ನೀಡಿರುವ ಅರ್ಜಿ ಮತ್ತು ನಂತರ ನಿಮ್ಮ ಶಾಲೆಯ ಆಡಳಿತ ಮಂಡಳಿಯೊಂದಿಗೆ ಮಾಡಿದ ಪತ್ರ ವ್ಯವಹಾರ ಹಾಗೂ ಇಲಾಖೆ ಅಧಿಕಾರಿಗಳ ಪರಿಶೀಲನಾ ವರದಿಯನ್ನು ಆಧರಿಸಿ **ಸೇಂಟ್ ಮೇರಿಸ್ ಹಿರಿಯ ಪ್ರಾಥಮಿಕ ಶಾಲೆ ವಿವೇಕನಂದನಗರ ಟಿ.ನರಸೀಪುರ ಡೈಸ್ ಸಂಖ್ಯೆ: 29261117514** ಈ ಶಾಲೆಗೆ **ಒಂದ ರಿಂದ ಎಂಟನೇ** ತರಗತಿಯವರೆಗೆ **2018-19 ನೇ ಸಾಲಿನಿಂದ 2020-2021** ಅವಧಿಯವರೆಗೆ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ತಾತ್ಕಾಲಿಕ ಮಾನ್ಯತೆಯನ್ನು ನೀಡಿದೆ.

**ಷರತ್ತುಗಳು:-**

01. ಈ ಮಾನ್ಯತೆಯು ಆರ್ ಟಿ ಇ ಕಾಯಿದೆ 2009 ಹಾಗೂ ಆರ್.ಟಿ.ಇ ನಿಯಮಗಳು 2012 ಕರ್ನಾಟಕ ಇದರ ಅಡಿಯಲ್ಲಿ ತಾತ್ಕಾಲಿಕವಾಗಿ ನೀಡಿದ ಮಾನ್ಯತೆಯಾಗಿದೆ.
02. ಎಂಟನೇ ತರಗತಿಯಿಂದ ಮುಂದಿನ ತರಗತಿಗೆ ಮುಂದುವರೆಸಲು ಅವಕಾಶವಿರುವುದಿಲ್ಲ.
03. ಸದರಿ ಶಾಲೆಯ ಆಡಳಿತ ಮಂಡಳಿಯು ಈ ಮಾನ್ಯತೆ ನೀಡಿದ ದಿನಾಂಕದಿಂದ ಆರ್.ಟಿ.ಇ ಕಾಯಿದೆ 2009 ಹಾಗೂ ಆರ್.ಟಿ.ಇ ನಿಯಮಗಳು 2012 ಕರ್ನಾಟಕ ಇದರ ನಿಬಂಧನೆಗಳಿಗೆ ಬದ್ಧವಾಗಿರಬೇಕು.
04. ಈ ಶಾಲೆಯು ಒಂದನೇ ತರಗತಿಗೆ ನೆರೆಹೊರೆಯ ವ್ಯಾಪ್ತಿಗೆ ಸೇರಿದ ಅವಕಾಶ ವಂಚಿತ ಪ್ರವರ್ಗಕ್ಕೆ ಸೇರಿದ ಮಕ್ಕಳು ಮತ್ತು ದುರ್ಬಲ ವರ್ಗಕ್ಕೆ ಸೇರಿದ ಶೇಕಡ 25 ರಷ್ಟು ಮಕ್ಕಳನ್ನು ಒಂದನೇ ತರಗತಿಗೆ ದಾಖಲಾತಿ ಮಾಡಿಕೊಂಡು ಮತ್ತು ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಪ್ರಾಥಮಿಕ ಶಿಕ್ಷಣ ಪೂರೈಸುವವರೆಗೆ ನೀಡುವುದು. ಪೂರ್ವಪ್ರಾಥಮಿಕ ಶಾಲೆಗೆ ಮಕ್ಕಳನ್ನು ದಾಖಲಿಸಿಕೊಂಡಲ್ಲಿ ಇದೇ ಪ್ರಾಥಮಿಕ ಶಿಕ್ಷಣ ಪೂರೈಸುವವರೆಗಿನ ನಿಬಂಧನೆಗೆ ಒಳಗಾಗಲ್ಪಡುತ್ತದೆ. ಆರ್ ಟಿ ಇ ನಿಯಮದಡಿ ದಾಖಲಾದ ಮಕ್ಕಳನ್ನು ಯಾವುದೇ ಕಾರಣಕ್ಕೂ ತರಗತಿಯಲ್ಲಿ ಇತರೆ ಮಕ್ಕಳಿಂದ ಪ್ರತ್ಯೇಕಿಸಿ ತಾರತಮ್ಯ ಮಾಡುವಂತಿಲ್ಲ ಅಥವಾ ಬೇರೆ ಮಾಡುವಂತಿಲ್ಲ ಅಥವಾ ಇತರೆ ಯಾವುದೇ ರೀತಿಯಲ್ಲಿ ಅವರನ್ನು ಬೇರೆಯಾಗಿ ಪರಗಣಿಸುವಂತಿಲ್ಲ.
05. 4 ನೇ ಪ್ಯಾರಾದಂತೆ ಶಾಲೆಗೆ ದಾಖಲಿಸಿದ ಮಕ್ಕಳಿಗೆ ಸೆಕ್ಷನ್ 12(2) ರ ಕಾಯಿದೆಯಂತೆ ಶುಲ್ಕ ಮರುಪಾವತಿ ಮಾಡಲಾಗುತ್ತದೆ. ಈ ಶುಲ್ಕ ಮರುಪಾವತಿ ಸ್ವೀಕರಿಸಲು ಶಾಲೆಯು ಒಂದು ಪ್ರತ್ಯೇಕ ಬ್ಯಾಂಕ್ ಖಾತೆಯನ್ನು ತೆರೆಯುವುದು ಮತ್ತು ಇಲಾಖೆಯ ಆಡಿಟ್ ಸಂದರ್ಭದಲ್ಲಿ ಮಾಹಿತಿ ಒದಗಿಸುವುದು.
06. ಶಾಲೆಯು/ಸಂಸ್ಥೆಯು ವಿದ್ಯಾರ್ಥಿಗಳ ಪೋಷಕರಿಂದ ಶಾಲಾ ದಾಖಲಾತಿ ಸಂದರ್ಭದಲ್ಲಿ ಅಥವಾ ಶೈಕ್ಷಣಿಕ ವರ್ಷದಲ್ಲಿ ಯಾವುದೇ ರೀತಿಯ ಕ್ಯಾಪಿಟೇಷನ್ ಶುಲ್ಕ ಅಥವಾ ಸ್ವ ಇಚ್ಛೆಯಿಂದ ನೀಡುವ ದೇಣಿಗೆಯನ್ನು ಸಂಗ್ರಹಿಸುವಂತಿಲ್ಲ. ಇಲಾಖೆಯಿಂದ ಅನುಮತಿಸಲ್ಪಟ್ಟ ಬೋಧನಾ ಶುಲ್ಕ ಮತ್ತು ಇತರೆ ಶುಲ್ಕವನ್ನು ಮಾತ್ರ ಪಡೆಯಬೇಕು. ಶಾಲಾ ಪ್ರಕಟಣಾ ಫಲಕದಲ್ಲಿ ಎಲ್ಲರಿಗೂ ಕಾಣುವಂತೆ ಶಾಲೆಯಿಂದ ಘೋಷಣೆಯಾದ ಶುಲ್ಕದ ವಿವರವನ್ನು ಪ್ರದರ್ಶಿಸುವುದು ಕಡ್ಡಾಯ .
07. ಶಾಲೆಯು ಮಕ್ಕಳ ದಾಖಲಾತಿ ಸಂದರ್ಭದಲ್ಲಿ ಮಕ್ಕಳನ್ನಾಗಲೀ ಅಥವಾ ಅವರ ಪೋಷಕರನ್ನಾಗಲೀ ಯಾವುದೇ ರೀತಿಯ ಪರೀಕ್ಷೆ, ಸಂದರ್ಶನದ ತರಹದ ಯಾವುದೇ ರೀತಿಯ ಸ್ಕ್ರೀನಿಂಗ್ ಪ್ರಕ್ರಿಯೆಗೆ ಒಳಪಡಿಸಬಾರದು.
08. ಇಲಾಖೆಯಿಂದ ಘೋಷಣೆಯಾದ ಅವಧಿಗೆ ಮಾತ್ರ ಮಕ್ಕಳನ್ನು ದಾಖಲಾತಿ ಮಾಡಿಕೊಳ್ಳುವುದು.
09. ಯಾವುದೇ ಮಕ್ಕಳಿಗೂ ಕೆಳಕಂಡ ಕಾರಣಗಳಿಗೆ ದಾಖಲಾತಿಯನ್ನು ತಿರಸ್ಕರಿಸುವಂತಿಲ್ಲ.

10. ಮಗುವಿನ ವಯಸ್ಸಿನ ದಾಖಲೆ ಇಲ್ಲದ ಕಾರಣಕ್ಕಾಗಿ ಜಾತಿ, ಧರ್ಮ ಅಥವಾ ಮಗುವಿನ ಜನನದ ಸ್ಥಳ, ಭಾಷೆ ಆಧಾರದ ಮೇಲೆ ,ಶೈಕ್ಷಣಿಕ ವರ್ಷದ ದಾಖಲಾತಿಗೆ ನಿಗದಿಪಡಿಸಿದ ಅವಧಿ ಮುಗಿದ ನಂತರವೂ ಯಾವುದೇ ಮಗುವಿಗೆ ದಾಖಲಾತಿ ನಿರಾಕರಿಸುವಂತಿಲ್ಲ.

11. ಶಾಲೆಯು ಕೆಳಗಿನ ಅಂಶಗಳನ್ನು ಖಚಿತಪಡಿಸಬೇಕು.

    i. ಶಾಲೆಯಲ್ಲಿ ದಾಖಲಾದ ಯಾವುದೇ ಮಗುವನ್ನು ಪ್ರಾಥಮಿಕ ಶಿಕ್ಷಣ ಮುಗಿಯುವವರೆಗೆ ಯಾವುದೇ ಕಾರಣಕ್ಕಾಗಿ ಶಾಲೆಯಿಂದ ಹಿಂದೆತೆಯುವುದಾಗಲೀ ಅಥವಾ ಹೊರಹಾಕುವುದಾಗಲೀ ಮಾಡುವಂತಿಲ್ಲ.

    ii. ಯಾವುದೇ ಮಗುವಿಗೆ ದೈಹಿಕ ಅಥವಾ ಮಾನಸಿಕ ಹಿಂಸೆಯನ್ನು ನೀಡುವಂತಿಲ್ಲ.

    iii. ಶಾಲೆಯು ಕಾಯಿದೆ ಅನ್ವಯ ವಿಶೇಷ ಅಗತ್ಯವುಳ್ಳ ಮಕ್ಕಳ ದಾಖಲಾತಿಯನ್ನು ಮಾಡಿಕೊಳ್ಳಬೇಕು.ರಾಜ್ಯ ಸರ್ಕಾರದಿಂದ ನಿಗದಿಪಡಿಸಿದ ವೇತನ ಮತ್ತು ಇತರ ಸೌಲಭ್ಯಗಳು ಹಾಗೂ ಶಿಕ್ಷಕರ ಸೇವಾ ಸೌಲಭ್ಯಗಳು ಇರಬೇಕು ಮತ್ತು ಶಿಕ್ಷಕರ ವೇತನವನ್ನು ನೇರವಾಗಿ ಅವರ ಬ್ಯಾಂಕ್ ಖಾತೆಗೆ ಪಾವತಿಸಬೇಕು.

    iv. ಶಿಕ್ಷಕರು ಕರ್ತವ್ಯ ಮತ್ತು ಜವಾಬ್ದಾರಿಯನ್ನು ಆರ್ ಟಿ ಇ ಕಾಯಿದೆ ಸೆಕ್ಷನ್ 24(1) ಮತ್ತು ನಿಯಮ 17 ರಲ್ಲಿ ಸೂಚಿಸಿದಂತೆ ನಿರ್ವಹಿಸಬೇಕು ಯಾವುದೇ ಶಿಕ್ಷಕರು ಖಾಸಗಿ ಮನೆ ಪಾಠದಲ್ಲಿ ತೊಡಗಿರಬಾರದು.

    v. ನಿಯಮ 21 ರನ್ವಯ ಪ್ರತಿಯೊಂದು ಮಗುವು ಪ್ರಾಥಮಿಕ ಶಿಕ್ಷಣವನ್ನು ಮುಗಿಸಿದಾಗ ಪ್ರಮಾಣ ಪತ್ರವನ್ನು ನೀಡಬೇಕು.

    Vi. ಪ್ರಾಥಮಿಕ ಶಿಕ್ಷಣ ಮುಗಿಯುವವರೆಗೆ ಯಾವುದೇ ಮಗು ಯಾವುದೇ ಪರೀಕ್ಷಾ ಮಂಡಳಿ ನಡೆಸುವ ಪರೀಕ್ಷೆಯನ್ನು ತೇರ್ಗಡೆಯಾಗಬೇಕಾಗಿಲ್ಲ.

12. ಶಾಲೆಯು ಯಾವ ಪ್ರಾಧಿಕಾರಕ್ಕೆ ಸೇರ್ಪಡೆಯಾಗಿದೆಯೋ ಆ ಪಠ್ಯಕ್ರಮ ಮತ್ತು ಪಠ್ಯ ಪುಸ್ತಕವನ್ನು ಅನುಸರಿಸಬೇಕು.

13. ಆರ್.ಟಿ.ಇ ಕಾಯಿದೆ ಸೆಕ್ಷನ್ 19 ರಲ್ಲಿ ನಿಗದಿಪಡಿಸಿದಂತೆ ಶಾಲೆಯಲ್ಲಿ ಲಭ್ಯವಿರುವ ಸೌಲಭ್ಯಕ್ಕೆ ಅನುಗುಣವಾಗಿ ವಿದ್ಯಾರ್ಥಿಗಳನ್ನು ದಾಖಲಿಸಿಕೊಳ್ಳಬೇಕು.

14. ಆರ್.ಟಿ.ಇ ಕಾಯಿದೆ ಸೆಕ್ಷನ್ 19 ರಲ್ಲಿ ಸ್ಪಷ್ಟಪಡಿಸಲಾದ ಮಾನದಂಡಗಳನ್ನು ಪೂರೈಸಬೇಕು ಯಾವುದೇ ಮಾನದಂಡ ಪೂರೈಸದೇ ಇರುವುದು ಕಂಡು ಬಂದಲ್ಲಿ ಮಾನ್ಯತೆಯನ್ನು ಹಿಂದಕ್ಕೆ ಪಡೆಯಲಾಗುವುದು.

15. ಶಾಲೆಯು ಶಾಲಾವರಣದ ಒಳಗೆ ಅಥವಾ ಹೊರಗೆ ಯಾವುದೇ ಮಾನ್ಯತೆ ಇಲ್ಲದ ತರಗತಿ/ವರ್ಗಗಳನ್ನು ನಡೆಸುವಂತಿಲ್ಲ.

16. ಶಾಲಾ ಕಟ್ಟಡವನ್ನು/ ಭೌತಿಕ ಸೌಲಭ್ಯಗಳನ್ನು ಹಗಲು ವೇಳೆಯಲ್ಲಿ/ರಾತ್ರಿ ವೇಳೆಯಲ್ಲಿ ಇತರೆ ಯಾವುದೇ ವಾಣಿಜ್ಯ ಉದ್ದೇಶಕ್ಕಾಗಲೀ, ರಾಜಕೀಯ ಚಟುವಟಿಕೆಗಳಿಗಾಗಲೀ ಅಥವಾ ಇತರೆ ಶೈಕ್ಷಣಿಕೇತರ ಚಟುವಟಿಕೆಗಳಿಗೆ ಬಳಕೆ ಮಾಡುವಂತಿಲ್ಲ.

17. ಶಾಲೆಯನ್ನು ಒಬ್ಬ ವ್ಯಕ್ತಿಯ ಅಥವಾ ಒಂದು ಗುಂಪಿನ ಅಥವಾ ಒಂದು ಸಂಸ್ಥೆಯ ಆರ್ಥಿಕ ಲಾಭ ಗಳಿಕೆಯ ಉದ್ದೇಶದಿಂದ ಬಳಕೆ ಮಾಡುವಂತಿಲ್ಲ.

18. ಶಾಲೆಯ ಎಲ್ಲ ಲೆಕ್ಕ ಪತ್ರಗಳನ್ನು ಚಾರ್ಟಡ್ ಅಕೌಂಟೆಂಟ್‌ರಿಂದ ಲೆಕ್ಕ ತಪಾಸಣೆ ಮಾಡಿಸಬೇಕು ಮತ್ತು ಒಂದು ಲೆಕ್ಕ ತಪಾಸಣೆ ಪ್ರತಿಯನ್ನು ಪ್ರತಿ ವರ್ಷದ ಜೂನ್ ಅಂತ್ಯಕ್ಕೆ ಉಪನಿರ್ದೇಶಕರು/ಬಿ.ಇ.ಒ. ಕಛೇರಿಗೆ ಸಲ್ಲಿಸಬೇಕು.

19. ಅನುಸೂಚಿತ ಕಾಯಿದೆಯಲ್ಲಿ ನಿಗದಿಪಡಿಸಲಾದ ಎಲ್ಲಾ ದಾಖಲೆಗಳನ್ನು ಸ್ವಯಂಘೋಷಣೆಯೊಂದಿಗೆ ಆಡಳಿತ ಮಂಡಳಿಯು ಸಲ್ಲಿಸಿ, ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮಾನ್ಯತೆಗಾಗಿ ಪ್ರಸ್ತಾವನೆ ಬಂದಲ್ಲಿ ಮಾನ್ಯತೆ ಸಿಂಧುವಾಗುತ್ತದೆ. ಯಾವುದೇ ದಾಖಲೆಗಳು ಸುಳ್ಳು ಎಂದು ಕಂಡುಬಂದಲ್ಲಿ ಮಾನ್ಯತೆಯು ತಾನೇ ತಾನಾಗಿ ರದ್ದಾಗುತ್ತದೆ.

20. ಈ ಕಛೇರಿಯಲ್ಲಿ ನಡೆದ ದಿನಾಂಕ: 06/10/2017 ರ ಸಭಾ ನಡಾವಳಿಯಂತೆ ಈ ಮಾನ್ಯತೆ ಪತ್ರ ನೀಡಲಾಗಿದೆ.

21. ಈ ಮಾನ್ಯತೆ ಪತ್ರವನ್ನು ಮೇಲ್ಕಂಡ 2 ರ ಅಂತಿಮ ಆದೇಶದಂತೆ ಈ ಮಾನ್ಯತೆ ಪತ್ರವನ್ನು ನೀಡಲಾಗಿದೆ.

22. ಇಲಾಖೆಯಿಂದ ಆಗಿಂದಾಗ್ಗೆ ಹೊರಡಿಸುವ ಶೈಕ್ಷಣಿಕ ಮತ್ತು ಆಡಳಿತಾತ್ಮಕ ನೀತಿ ನಿಯಮಾವಳಿಗಳಿಗೆ ಬದ್ಧವಾಗಿರಬೇಕು.

Swatha

ಉಪನಿರ್ದೇಶಕರು{ಆಡಳಿತ}
ಸಾ.ಶಿ.ಇ.ಮೈಸೂರು

ಪ್ರತಿಯನ್ನು:

1. ಕ್ಷೇತ್ರಶಿಕ್ಷಣಾಧಿಕಾರಿಗಳು, ಟಿ.ನರಸೀಪುರ
2. ಕಛೇರಿ ಪ್ರತಿ